B2

1. ಕೆಳಗೆ ನೀಡಿರುವ ಕೇಂದ್ರಾಡಳಿತ ಪ್ರದೇಶಗಳಲ್ಲಿ ಯಾವುವು ರಾಜ್ಯಸಭೆಯಲ್ಲಿ ಪ್ರಾತಿನಿಧಿತ್ವ ಹೊಂದಿಲ್ಲ ?

(1) ಚಂಡೀಗಡ, ಲಕ್ಷದ್ವೀಪ, ಲಡಾಕ್

(2) ಪುದುಚೇರಿ, ಜಮ್ಮು ಮತ್ತು ಕಾಶ್ಮೀರ, ಲಡಾಕ್

(3) ಅಂಡಮಾನ್ ಮತ್ತು ನಿಕೋಬಾರ್, ದೆಹಲಿ, ಪುದುಚೇರಿ

(4) ದಾದ್ರಾ, ನಗರ ಹವೇಲಿ, ದಮನ್ ಮತ್ತು ದಿಯು, ದೆಹಲಿ, ಲಕ್ಷದ್ವೀಪ

2. ಭಾರತ ಸರಕಾರದ ಅತ್ಯುನ್ನತ ಕಾನೂನು ಸಲಹೆಗಾರರು

(1) ಕಂಟ್ರೋಲರ್ ಮತ್ತು ಆಡಿಟರ್ ಜನರಲ್
(2) ಸಾಲಿಸಿಟರ್ ಜನರಲ್
(3) ಅಡ್ವೋಕೇಟ್ ಜನರಲ್
(4) ಅಟಾರ್ನಿ ಜನರಲ್

3. ರಾಜ್ಯಪಾಲರು ತಮ್ಮ ರಾಜೀನಾಮೆ ಪತ್ರವನ್ನು ಈ ಕೆಳಕಂಡವರಿಗೆ ನೀಡುತ್ತಾರೆ.

(1) ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಾಧೀಶರು
(2) ಸಂಬಂಧಿಸಿದ ರಾಜ್ಯದ ಮುಖ್ಯಮಂತ್ರಿ
(3) ರಾಷ್ಟ್ರಪತಿ
(4) ಪ್ರಧಾನಮಂತ್ರಿ

4. ಭಾರತ ಸಂವಿಧಾನದ 163ನೇ ವಿಧಿಯನ್ವಯ, ಸಚಿವ ಸಂಪುಟವು ನೆರವು ಮತ್ತು ಸಲಹೆ ನೀಡುವುದು –

(1) ವಿಧಾನ ಸಭೆಗೆ
(2) ಮುಖ್ಯಮಂತ್ರಿಗೆ
(3) ರಾಜ್ಯದ ರಾಜ್ಯಪಾಲರಿಗೆ
(4) ವಿಧಾನ ಪರಿಷತ್ತಿಗೆ

---

ಕಚ್ಚಾ ಕೆಲಸಕ್ಕೆ ಸ್ಥಳ

5. ಷಡ್ದರ್ಶನಗಳಿಗೆ ಸಂಬಂಧಿಸಿದಂತೆ ತಪ್ಪಾದ ಜೋಡಿಗಳನ್ನು ಗುರುತಿಸಿ.

(a) ನ್ಯಾಯ – ಗೌತಮ

(b) ಯೋಗ – ಜೈಮಿನಿ

(c) ಸಾಂಖ್ಯ – ಕಪಿಲ

(d) ಪೂರ್ವ-ಮೀಮಾಂಸಾ – ಪತಂಜಲಿ

(1) (a) ಮತ್ತು (d)

(2) (a) ಮತ್ತು (b)

(3) (a) ಮತ್ತು (c)

(4) (b) ಮತ್ತು (d)

6. ಪಟ್ಟಿ-I ರ ದಿನಾಚರಣೆಗಳನ್ನು ಪಟ್ಟಿ-II ರಲ್ಲಿ ಕೊಟ್ಟಿರುವ ದಿನಾಂಕಗಳೊಂದಿಗೆ ಹೊಂದಿಸಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

| ಪಟ್ಟಿ-I (ದಿನಾಚರಣೆ) | ಪಟ್ಟಿ-II (ದಿನಾಂಕ) |
|---|---|
| (a) ಭೂಮಿ ದಿನ | (i) 02 ಡಿಸೆಂಬರ್ |
| (b) ವಿಶ್ವ ಓಝೋನ್ ದಿನ | (ii) 22 ಏಪ್ರಿಲ್ |
| (c) ರಾಷ್ಟ್ರೀಯ ಮಾಲಿನ್ಯ ತಡೆಗಟ್ಟುವ ದಿನ | (iii) 11 ಜುಲೈ |
| (d) ವಿಶ್ವ ಜನಸಂಖ್ಯಾ ದಿನ | (iv) 16 ಸೆಪ್ಟೆಂಬರ್ |

ಸಂಕೇತಗಳು:

(1) a – ii, b – i, c – iii, d – iv

(2) a – iv, b – iii, c – i, d – ii

(3) a – iii, b – ii, c – iv, d – i

(4) a – ii, b – iv, c – i, d – iii

7. ಒಲಿಂಪಿಕ್ ಧ್ಯೇಯದ ಸರಿಯಾದ ಕ್ರಮ:

(1) ಹೈಯರ್, ಸ್ಟ್ರಾಂಗರ್, ಫಾಸ್ಟರ್ – ಟುಗೆದರ್

(2) ಫಾಸ್ಟರ್, ಸ್ಟ್ರಾಂಗರ್, ಹೈಯರ್ – ಟುಗೆದರ್

(3) ಹೈಯರ್, ಫಾಸ್ಟರ್, ಸ್ಟ್ರಾಂಗರ್ – ಟುಗೆದರ್

(4) ಫಾಸ್ಟರ್, ಹೈಯರ್, ಸ್ಟ್ರಾಂಗರ್ – ಟುಗೆದರ್

ಕಚ್ಚಾ ಕೆಲಸಕ್ಕೆ ಸ್ಥಳ



Scanned with OKEN Scanner

8. ಮೊಟ್ಟ ಮೊದಲ ಸಮ್ಮರ್ ಪ್ಯಾರಾಲಿಂಪಿಕ್ ಸ್ಪರ್ಧೆಗಳು ಆಯೋಜಿಸಲ್ಪಟ್ಟ ಸ್ಥಳ _____ ಮತ್ತು ವರ್ಷ _____

(1) ಟೋಕಿಯೋ, 1964
(2) ಅಟ್ಲಾಂಟಾ, 1964
(3) ರೋಮ್, 1960
(4) ಟೊರಾಂಟೋ, 1960

9. ಈ ಕೆಳಗಿನ ಯಾವ ಸಂಯೋಜನೆ/ಗಳು ಮಾನವ ಅಭಿವೃದ್ಧಿ ಸೂಚ್ಯಂಕ ನಿರ್ಧಾರಕಗಳನ್ನು ಸರಿಯಾಗಿ ತೋರಿಸುತ್ತದೆ?

(a) ಆರೋಗ್ಯ, ಯೋಗ ಮತ್ತು ಸಂತೋಷ
(b) ಆರೋಗ್ಯ, ಓದುವಿಕೆ ಮತ್ತು ಬರೆಯುವಿಕೆ
(c) ಆರೋಗ್ಯ, ಶಿಕ್ಷಣ ಮತ್ತು ಜೀವನಮಟ್ಟ
(d) ಆರೋಗ್ಯ, ಸಂವಹನ ಮತ್ತು ಬರೆಯುವಿಕೆ

ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

(1) (b) ಮಾತ್ರ
(2) (a) ಮಾತ್ರ
(3) (b) ಮತ್ತು (d) ಮಾತ್ರ
(4) (c) ಮಾತ್ರ

10. ಕೆಳಗಿನವುಗಳನ್ನು ಹೊಂದಿಸಿ.

| ಪಟ್ಟಿ-I (ಹಣಕಾಸು ಆಯೋಗ) | ಪಟ್ಟಿ-II (ಮುಖ್ಯಸ್ಥರು) |
|---|---|
| (a) ಒಂದನೇ | (i) ಕೆ. ಸಂತಾನಂ |
| (b) ಎರಡನೇ | (ii) ಮಹಾವೀರ್ ತ್ಯಾಗಿ |
| (c) ಮೂರನೇ | (iii) ಕೆ.ಸಿ. ನಿಯೋಗಿ |
| (d) ನಾಲ್ಕನೇ | (iv) ಅಶೋಕ್ ಕುಮಾರ್ ಚಂದಾ |
| (e) ಐದನೇ | (v) ಪಿ.ವಿ. ರಾಜಮನ್ನಾರ್ |

ಸಂಕೇತಗಳು:

(1) a – iv, b – iii, c – i, d – v, e – ii
(2) a – iii, b – i, c – iv, d – v, e – ii
(3) a – iii, b – iv, c – i, d – v, e – ii
(4) a – i, b – iii, c – v, d – ii, e – iv

ಕಚ್ಚಾ ಕೆಲಸಕ್ಕೆ ಸ್ಥಳ



Scanned with OKEN Scanner

11. ಟರ್ನರ್ ಸಿಂಡ್ರೋಮ್ ಕಾಯಿಲೆಯು ಈ ಕೆಳಗಿನ ಕಾರಣದಿಂದ ಬರುತ್ತದೆ.

(1) ಕ್ರೋಮೋಸೋಮ್‌ಗಳ ಸಂಖ್ಯೆ 47 ಆಗುವುದರಿಂದ [ಒಂದು 'X' ಕ್ರೋಮೋಸೋಮ್ ಹೆಚ್ಚಾಗಿರುವುದರಿಂದ]

(2) ಕ್ರೋಮೋಸೋಮ್‌ಗಳ ಸಂಖ್ಯೆ 48 ಆಗುವುದರಿಂದ

(3) ಕ್ರೋಮೋಸೋಮ್‌ಗಳ ಸಂಖ್ಯೆ 46 ಆಗುವುದರಿಂದ

(4) ಕ್ರೋಮೋಸೋಮ್‌ಗಳ ಸಂಖ್ಯೆ 47 ಆಗುವುದರಿಂದ [21ನೇ ಜೋಡಿಯಲ್ಲಿ ಒಂದು ಕ್ರೋಮೋಸೋಮ್‌ನ ಹೆಚ್ಚಳ]

12. ಈ ಕೆಳಗಿನ ಯಾವ ಮೈಕ್ರೋಬ್ (ಪಾಚಿ) ಅನ್ನು ಗಗನಯಾತ್ರಿಗಳು ಆಹಾರವಾಗಿ ಬಳಸುವರು?

(1) ಸ್ಪೈರೋಗೈರಾ

(2) ಜೆಲಿಡಿಯಂ

(3) ಸ್ಪೈರುಲಿನಾ

(4) ಗ್ರ್ಯಾಸಿಲೇರಿಯಾ

13. ಮಿನಾಮಟಾ ಒಪ್ಪಂದವು 2013ರಲ್ಲಿ ವಿಶ್ವಸಂಸ್ಥೆಯು ಅಂಗೀಕರಿಸಿದ ಜಾಗತಿಕ ಒಪ್ಪಂದವಾಗಿದ್ದು, ಇದು ಮಾನವ (ಆಂಥ್ರೋಪೊಜೆನಿಕ್) ಚಟುವಟಿಕೆಗಳಿಂದ ಉಂಟಾಗುವ ______ ಮಾಲಿನ್ಯದಿಂದ ಮಾನವನ ಆರೋಗ್ಯ ಮತ್ತು ಪರಿಸರವನ್ನು ರಕ್ಷಿಸುವುದಾಗಿದೆ.

(1) ನೈಟ್ರೋಜನ್ ಆಕ್ಸೈಡ್‌ಗಳು

(2) ಪಾದರಸ

(3) ಕಾರ್ಬನ್ ಮೊನಾಕ್ಸೈಡ್

(4) ಸಲ್ಫರ್ ಡೈಆಕ್ಸೈಡ್

---

ಕಚ್ಚಾ ಕೆಲಸಕ್ಕೆ ಸ್ಥಳ

14. ಕಂಪ್ರೆಸ್ಡ್ ನ್ಯಾಚುರಲ್ ಗ್ಯಾಸ್ (CNG) ಅನ್ನು ಡೀಸೆಲ್ ಅಥವಾ ಪೆಟ್ರೋಲ್‌ಗೆ ಬದಲಾಗಿ ಉಪಯೋಗಿಸಲು ಇರುವ ಮುಖ್ಯ ಕಾರಣವನ್ನು ಗುರುತಿಸಿ.

(a) ಹೆಚ್ಚು ಪರಿಣಾಮಕಾರಿಯಾಗಿ ಉರಿಯುತ್ತದೆ.

(b) ಅಗ್ಗವಾಗಿರುತ್ತದೆ.

(c) ಸಿಎನ್‌ಜಿಯನ್ನು ನಿರಂತರವಾಗಿ ಮತ್ತು ಅಡೆತಡೆಯಿಲ್ಲದೆ ಪೂರೈಕೆ ಮಾಡಲು ಪೈಪ್‌ಲೈನ್‌ಗಳನ್ನು ಹಾಕುವುದು ಸುಲಭ.

(d) ಕಲಬೆರಕೆ ಮಾಡುವುದು ಅಥವಾ ಅಕ್ರಮವಾಗಿ ವರ್ಗಾಯಿಸುವುದು ಕಷ್ಟಕರ.

(1) (c), (b) ಮತ್ತು (a) ಮಾತ್ರ
(2) (a), (c) ಮತ್ತು (d) ಮಾತ್ರ
(3) (a), (b) ಮತ್ತು (d) ಮಾತ್ರ
(4) (b), (c) ಮತ್ತು (d) ಮಾತ್ರ

15. ಮೀನಿನ ಎಣ್ಣೆಯಲ್ಲಿ ಸಮೃದ್ಧವಾಗಿರುವುದು ______

(1) ಒಲಿಗೋಸ್ಯಾಕರೈಡ್‌ಗಳು
(2) ವಿಟಮಿನ್‌ಗಳು
(3) ಶರ್ಕರಪಿಷ್ಟಗಳು
(4) ಒಮೆಗಾ 3 ಫ್ಯಾಟೀ ಆ್ಯಸಿಡ್‌ಗಳು

16. ಈ ಕೆಳಗಿನ ಗುಂಪಿನಲ್ಲಿ ಯಾವುದು ಮಾರ್ಪಾಡಾದ ಎಲೆಗೆ ಉದಾಹರಣೆಯಾಗಿದೆ?

(1) ಬೆಳ್ಳುಳ್ಳಿ ಮತ್ತು ಕ್ಯಾಕ್ಟಸ್
(2) ಈರುಳ್ಳಿ ಮತ್ತು ಕ್ಯಾಕ್ಟಸ್
(3) ಬಟಾಣಿ ಮತ್ತು ಶುಂಠಿ
(4) ಈರುಳ್ಳಿ ಮತ್ತು ಬೆಳ್ಳುಳ್ಳಿ

17. ಮೂತ್ರಪಿಂಡಗಳ ಅಸಮರ್ಪಕ ಕಾರ್ಯನಿರ್ವಹಣೆಯು ರಕ್ತದಲ್ಲಿ ಯೂರಿಯಾದ ಪ್ರಮಾಣವನ್ನು ಹೆಚ್ಚಿಸಲು ಕಾರಣವಾಗಬಹುದು. ಈ ಸ್ಥಿತಿಯ ಹೆಸರು

(1) ನೆಫ್ರೈಟಿಸ್
(2) ಹೀಮೋಡಯಾಲಿಸಿಸ್
(3) ಯುರೇಮಿಯಾ
(4) ಮೂತ್ರಪಿಂಡ ಕಲ್ಲುಗಳು

---

ಕಚ್ಚಾ ಕೆಲಸಕ್ಕೆ ಸ್ಥಳ



Scanned with OKEN Scanner

18. ಜೆಲ್ ವಿದ್ಯುತ್ಸರಣದಲ್ಲಿ ಡಿ.ಎನ್.ಎ. ಯಾವ ಕಡೆ ಚಲಿಸುತ್ತದೆ ?

(1) ಯಾದೃಚ್ಛಿಕ
(2) ಋಣಾತ್ಮಕ ಎಲೆಕ್ಟ್ರೋಡ್
(3) ಧನಾತ್ಮಕ ಎಲೆಕ್ಟ್ರೋಡ್
(4) ತಟಸ್ಥ

19. ಹೊಂದಿಸಿ ಬರೆಯಿರಿ.

| ಪಟ್ಟಿ-I (ಗ್ರಹ) | ಪಟ್ಟಿ-II (ಭ್ರಮಣೆಯ ಅವಧಿ) |
|---|---|
| (a) ಗುರು | (i) 84 ವರ್ಷಗಳು |
| (b) ಶನಿ | (ii) 12 ವರ್ಷಗಳು |
| (c) ಯುರೇನಸ್ | (iii) 165 ವರ್ಷಗಳು |
| (d) ನೆಪ್ಚೂನ್ | (iv) 29 ವರ್ಷಗಳು |

ಸಂಕೇತಗಳು:

(1) a – ii, b – iv, c – i, d – iii
(2) a – iv, b – i, c – iii, d – ii
(3) a – iii, b – ii, c – iv, d – i
(4) a – i, b – iii, c – iv, d – ii

20. ಕೆಳಗಿನ ಹೇಳಿಕೆಗಳನ್ನು ಗಮನಿಸಿ.

ಹೇಳಿಕೆ-I: ಫ್ಯೂಸ್ ಇದು ಅತಿಯಾದ ವಿದ್ಯುತ್ ಪ್ರವಾಹವನ್ನು ತಡೆಯುವ ಮೂಲಕ ವಿದ್ಯುತ್ ಮಂಡಲಗಳು ಮತ್ತು ಉಪಕರಣಗಳನ್ನು ರಕ್ಷಿಸುವ ಸಾಧನವಾಗಿದೆ.

ಹೇಳಿಕೆ-II: ಫ್ಯೂಸನ್ನು ವಿದ್ಯುತ್ ಸಾಧನಗಳೊಂದಿಗೆ ಸಮಾನಾಂತರ ಕ್ರಮದಲ್ಲಿ ಜೋಡಿಸಿರುತ್ತಾರೆ.

(1) ಹೇಳಿಕೆ-I ತಪ್ಪಾಗಿದೆ ಆದರೆ ಹೇಳಿಕೆ-II ಸರಿಯಾಗಿದೆ.
(2) ಹೇಳಿಕೆ-I ಮತ್ತು ಹೇಳಿಕೆ-II ಎರಡೂ ಸರಿಯಾಗಿವೆ.
(3) ಹೇಳಿಕೆ-I ಮತ್ತು ಹೇಳಿಕೆ-II ಎರಡೂ ತಪ್ಪಾಗಿವೆ.
(4) ಹೇಳಿಕೆ-I ಸರಿಯಾಗಿದೆ ಆದರೆ ಹೇಳಿಕೆ-II ತಪ್ಪಾಗಿದೆ.

ಕಚ್ಚಾ ಕೆಲಸಕ್ಕೆ ಸ್ಥಳ



Scanned with OKEN Scanner

21. GPS ಬೆಂಬಲಿತ ಜಿಯೋ ಆಗ್‌ಮೆಂಟೆಡ್ ನೇವಿಗೇಶನ್ (GAGAN) ಒಂದು ಉಪಗ್ರಹ ಆಧಾರಿತ ಆಗ್‌ಮೆಂಟೇಶನ್ ಸಿಸ್ಟಂ (SBAS) ಆಗಿದೆ. ಇದನ್ನು ಜಂಟಿಯಾಗಿ ಅಭಿವೃದ್ಧಿ ಪಡಿಸಿದವರು

(1) ISRO ಮತ್ತು AAI

(2) ISRO ಮತ್ತು DRDO

(3) DRDO ಮತ್ತು AAI

(4) AAI ಮತ್ತು HAL

22. ವಿದ್ಯುತ್ ಇಸ್ತ್ರಿ ಪೆಟ್ಟಿಗೆಯ ಸುರುಳಿಗಳಲ್ಲಿ ಮಿಶ್ರಲೋಹಗಳನ್ನು ಬಳಸುತ್ತಾರೆ. ಏಕೆಂದರೆ

(1) ಮಿಶ್ರಲೋಹಗಳು ಹೆಚ್ಚಿನ ತಾಪಮಾನದಲ್ಲಿ ಸುಲಭವಾಗಿ ಆಕ್ಸಿಡೀಕರಣಗೊಳ್ಳುತ್ತವೆ.

(2) ಮಿಶ್ರಲೋಹದ ರೋಧಶೀಲತೆಯು ಅದರ ಘಟಕ ಲೋಹಗಳಿಗಿಂತಲೂ ಹೆಚ್ಚಿನದ್ದಾಗಿರುತ್ತದೆ.

(3) ಮಿಶ್ರಲೋಹದ ಪ್ರತಿರೋಧವು ಅದರ ಘಟಕ ಲೋಹಗಳ ರೋಧಕ್ಕಿಂತಲೂ ಹೆಚ್ಚಿನದ್ದಾಗಿರುತ್ತದೆ.

(4) ಮಿಶ್ರಲೋಹದ ರೋಧಶೀಲತೆಯು ಅದರ ಘಟಕ ಲೋಹಗಳಿಗಿಂತಲೂ ಕಡಿಮೆಯಾಗಿರುತ್ತದೆ.

23. ಸುರೇಶನು, ಕಳೆದ ಮೂರು ದಿನಗಳಿಂದ ತಾಮ್ರದ ಪಾತ್ರೆಯಲ್ಲಿ ಇಟ್ಟಿರುವ ಮೊಸರನ್ನು ರಾತ್ರಿ ಊಟದಲ್ಲಿ ಬಳಸುತ್ತಾನೆ. ತಡರಾತ್ರಿ ಅವನಿಗೆ ಹೊಟ್ಟೆನೋವಿನ ಅನುಭವವಾಗುತ್ತದೆ. ಇದಕ್ಕೆ ಕಾರಣವಾಗಬಹುದಾದ ಒಂದು ಅಂಶವೆಂದರೆ

(1) ಮೊಸರು ತಾಮ್ರದೊಂದಿಗೆ ವರ್ತಿಸುವುದು
(2) ಮೊಸರಿನಲ್ಲಿರುವ ನೀರು
(3) ಮೊಸರಿನಲ್ಲಿರುವ ಸಿಹಿಯ ಅಂಶ
(4) ಮೊಸರಿನಲ್ಲಿರುವ ಲವಣದ ಅಂಶ

24. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿರಿ ಮತ್ತು ಕೆಳಗೆ ನೀಡಿದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ.

ಹೇಳಿಕೆ-I: ಆಮ್ಲಗಳ ರುಚಿ ಕಹಿಯಾಗಿದೆ.
ಹೇಳಿಕೆ-II: ಪ್ರತ್ಯಾಮ್ಲಗಳ ರುಚಿ ಹುಳಿಯಾಗಿದೆ.

(1) ಹೇಳಿಕೆ-I ಮತ್ತು ಹೇಳಿಕೆ-II ಎರಡೂ ಸರಿ.

(2) ಹೇಳಿಕೆ-I ಮತ್ತು ಹೇಳಿಕೆ-II ಎರಡೂ ಸರಿಯಿಲ್ಲ.

(3) ಹೇಳಿಕೆ-I ಸರಿ ಆದರೆ ಹೇಳಿಕೆ-II ಸರಿಯಿಲ್ಲ .

(4) ಹೇಳಿಕೆ-I ಸರಿಯಿಲ್ಲ ಆದರೆ ಹೇಳಿಕೆ-II ಸರಿ.

---

ಕಚ್ಚಾ ಕೆಲಸಕ್ಕೆ ಸ್ಥಳ



Scanned with OKEN Scanner

25. ಹೊಂದಿಸಿ ಬರೆಯಿರಿ.

| ಪಟ್ಟಿ-I | ಪಟ್ಟಿ-II |
|---|---|
| (a) Cu + Zn | (i) ಸೋಲ್ಡರ್ |
| (b) Cu + Sn | (ii) ಹಿತ್ತಾಳೆ |
| (c) Pb + Sn | (iii) ಅಮಾಲ್ಗಂ |
| (d) Na + Hg | (iv) ಕಂಚು |

ಸಂಕೇತಗಳು:

(1) a – i, b – ii, c – iii, d – iv
(2) a – ii, b – iv, c – i, d – iii
(3) a – i, b – iv, c – ii, d – iii
(4) a – ii, b – iii, c – i, d – iv

26. ದೂರದರ್ಶನದ ನಳಿಕೆಗಳು ಮತ್ತು ದೀಪಸ್ತಂಭಗಳಲ್ಲಿ (ಲೈಟ್ ಹೌಸ್‌ಗಳಲ್ಲಿ) ಉಪಯೋಗಿಸುವ ಅನಿಲಗಳು ಇವಾಗಿವೆ.

(1) ಮಿಥೇನ್ ಮತ್ತು ಹೀಲಿಯಂ
(2) ಆಮ್ಲಜನಕ ಮತ್ತು ಜಲಜನಕ
(3) ಸಾರಜನಕ ಮತ್ತು ಇಂಗಾಲದ ಡೈ ಆಕ್ಸೈಡ್
(4) ಕ್ರಿಪ್ಟಾನ್ ಮತ್ತು ಕ್ಸೆನಾನ್

27. ಅಪಾಯ ಸಂಕೇತ ದೀಪಗಳು ಕೆಂಪು ಬಣ್ಣದಲ್ಲಿರುತ್ತವೆ. ಏಕೆಂದರೆ ಕೆಂಪು ಬಣ್ಣವು, ಮಂಜು ಅಥವಾ ಹೊಗೆಯಿಂದ ________.

(1) ಕನಿಷ್ಠ ವಿವರ್ತಿಸುತ್ತದೆ
(2) ಗರಿಷ್ಠ ಚದುರುತ್ತದೆ
(3) ಕನಿಷ್ಠ ಚದುರುತ್ತದೆ
(4) ಗರಿಷ್ಠ ವಿವರ್ತಿಸುತ್ತದೆ

28. ಸಾವಯವ ಅವಶೇಷದಿಂದಾಗಿ ಮಲಿನಗೊಂಡ ಬಾವಿಗಳು ಮತ್ತು ಕೆರೆಗಳ ನೀರನ್ನು ಶುದ್ಧೀಕರಿಸಲು ಈ ಕೆಳಗಿನ ಯಾವ ಸಂಯುಕ್ತವನ್ನು ಬಳಸಬಹುದಾಗಿದೆ?

(1) ಪೊಟ್ಯಾಶಿಯಂ ಸಲ್ಫೇಟ್
(2) ಪೊಟ್ಯಾಶಿಯಂ ಡೈಕ್ರೊಮೇಟ್
(3) ಪೊಟ್ಯಾಶಿಯಂ ಪರಮಾಂಗನೇಟ್
(4) ಪೊಟ್ಯಾಶಿಯಂ ಕ್ಲೋರೈಡ್

ಕಚ್ಚಾ ಕೆಲಸಕ್ಕೆ ಸ್ಥಳ



Scanned with OKEN Scanner

29. ಪಟ್ಟಿ-I ನ್ನು ಪಟ್ಟಿ-IIರ ಜೊತೆ ಹೊಂದಿಸಿ ಮತ್ತು ಕೆಳಗೆ ನೀಡಿರುವ ಸಂಕೇತಗಳಿಂದ ಸರಿಯಾದ ಉತ್ತರವನ್ನು ಆರಿಸಿ.

| ಪಟ್ಟಿ-I (ಉಪಕರಣಗಳು) | ಪಟ್ಟಿ-II (ಬಳಕೆ) |
|---|---|
| (a) ಪ್ಲ್ಯಾನಿಮೀಟರ್ | (i) ನಕ್ಷೆಗಳನ್ನು ನಕಲು ಮಾಡಲು, ದೊಡ್ಡದಾಗಿಸಲು ಅಥವಾ ಚಿಕ್ಕದಾಗಿಸಲು |
| (b) ಪ್ಯಾಂಥೊಗ್ರಾಫ್ | (ii) ಕ್ಷೇತ್ರವನ್ನು ಅಳೆಯಲು |
| (c) ಬ್ಯಾರೊಮೀಟರ್ | (iii) ವಾಯುಮಂಡಲದ ಒತ್ತಡ ಅಳೆಯಲು |
| (d) ಥರ್ಮೋಮೀಟರ್ | (iv) ಉಷ್ಣಾಂಶ ಅಳೆಯಲು |

ಸಂಕೇತಗಳು:

(1) a – iii, b – ii, c – i, d – iv
(2) a – ii, b – i, c – iii, d – iv
(3) a – i, b – ii, c – iii, d – iv
(4) a – iii, b – i, c – ii, d – iv

30. ಕರ್ನಾಟಕದ ಕೆಲವು ಪ್ರಮುಖ ಶಿಖರಗಳನ್ನು ಅವುಗಳ ಎತ್ತರಕ್ಕೆ ಅನುಗುಣವಾಗಿ ಇಳಿಕೆಯ ಕ್ರಮದಲ್ಲಿ ಗುರುತಿಸಿ.

(1) ಮೇಲುಕೋಟೆ ಬೆಟ್ಟ, ಚಾಮುಂಡಿ ಬೆಟ್ಟ, ಬಿಳಿಗಿರಿ ರಂಗನ ಬೆಟ್ಟ, ಗೋಪಾಲಸ್ವಾಮಿ ಬೆಟ್ಟ
(2) ಚಾಮುಂಡಿ ಬೆಟ್ಟ, ಬಿಳಿಗಿರಿ ರಂಗನ ಬೆಟ್ಟ, ಗೋಪಾಲಸ್ವಾಮಿ ಬೆಟ್ಟ, ಮೇಲುಕೋಟೆ ಬೆಟ್ಟ
(3) ಬಿಳಿಗಿರಿ ರಂಗನ ಬೆಟ್ಟ, ಗೋಪಾಲಸ್ವಾಮಿ ಬೆಟ್ಟ, ಮೇಲುಕೋಟೆ ಬೆಟ್ಟ, ಚಾಮುಂಡಿ ಬೆಟ್ಟ
(4) ಗೋಪಾಲಸ್ವಾಮಿ ಬೆಟ್ಟ, ಮೇಲುಕೋಟೆ ಬೆಟ್ಟ, ಬಿಳಿಗಿರಿ ರಂಗನ ಬೆಟ್ಟ, ಚಾಮುಂಡಿ ಬೆಟ್ಟ

31. ಈ ಕೆಳಗಿನವುಗಳಲ್ಲಿ ಸರಿಯಾದ ಜೋಡಣೆಯನ್ನು ಗುರುತಿಸಿ.

(a) ಭೋರ್ ಘಾಟ್ – ಮುಂಬಯಿ ಮತ್ತು ಪುಣೆ
(b) ಥಾಲ್ ಘಾಟ್ – ಮುಂಬಯಿ ಮತ್ತು ನಾಸಿಕ್
(c) ಪಾಲ್ ಘಾಟ್ – ರಾಜ್ಸಮಂದ್ ಮತ್ತು ಪಾಲಿ
(d) ಆಗುಂಬೆ ಘಾಟ್ – ಉಡುಪಿ ಮತ್ತು ಶಿವಮೊಗ್ಗ

(1) (a), (b) ಮತ್ತು (d) ಸರಿಯಾಗಿವೆ.
(2) (a), (b), (c) ಮತ್ತು (d) ಸರಿಯಾಗಿವೆ.
(3) (a) ಮತ್ತು (b) ಸರಿಯಾಗಿವೆ.
(4) (c) ಮತ್ತು (d) ಸರಿಯಾಗಿವೆ.


---

ಕಚ್ಚಾ ಕೆಲಸಕ್ಕೆ ಸ್ಥಳ



Scanned with OKEN Scanner

32. ಈ ಕೆಳಗೆ ಕೊಟ್ಟಿರುವ ನಕ್ಷೆಯಲ್ಲಿ ಹಂಚಿಕೆಯಾಗಿರುವ ಮಣ್ಣಿನ ವಿಧವನ್ನು ಗುರುತಿಸಿ.



(1) ಕೆಂಪು ಮಣ್ಣು
(2) ಮೆಕ್ಕಲು ಮಣ್ಣು
(3) ಜಂಬಿಟ್ಟಿಗೆ ಮಣ್ಣು
(4) ಕಪ್ಪು ಮಣ್ಣು

33. ಕೆಳಕಂಡ ನಗರಗಳ ವರ್ಗೀಕರಣವನ್ನು ಪರಿಗಣಿಸಿ.

(a) ನಗರ

(b) ಮೆಗಾಸಿಟಿ

(c) ಮೆಗಲೋಪೋಲಿಸ್

(d) ನಗರ ಸಮುಚ್ಚಯ

ಈ ಕೆಳಗಿನವುಗಳಲ್ಲಿ ಕಡಿಮೆ ಗಾತ್ರದಿಂದ ಹೆಚ್ಚು ಗಾತ್ರದ ಜನಸಂಖ್ಯೆಯ ಸರಿಯಾದ ಕ್ರಮ ಯಾವುದು?

(1) (a), (d), (c) ಮತ್ತು (b)
(2) (d), (c), (a) ಮತ್ತು (b)
(3) (b), (a), (c) ಮತ್ತು (d)
(4) (a), (b), (d) ಮತ್ತು (c)

ಕಚ್ಚಾ ಕೆಲಸಕ್ಕೆ ಸ್ಥಳ



Scanned with OKEN Scanner

34. ಭಾರತದ ಬಂದರುಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಜೋಡಿಗಳು ಸರಿಯಾಗಿವೆ?

(a) ಜವಾಹರ್‌ಲಾಲ್ ನೆಹರು ಬಂದರು - ನವಶೇವಾ

(b) ದೀನ್ ದಯಾಳ್ ಬಂದರು - ಕಾಂಡ್ಲಾ

(c) ವಿ.ಓ. ಚಿದಂಬರನಾರ್ ಬಂದರು - ಪಾರದೀಪ್

(d) ಕಾಮರಾಜರ್ ಬಂದರು - ಎನ್ನೋರ್

ಸಂಕೇತಗಳು:

(1) (a), (c) ಮತ್ತು (d) ಸರಿಯಾಗಿವೆ
(2) (a), (b) ಮತ್ತು (c) ಸರಿಯಾಗಿವೆ
(3) (b), (c) ಮತ್ತು (d) ಸರಿಯಾಗಿವೆ
(4) (a), (b) ಮತ್ತು (d) ಸರಿಯಾಗಿವೆ

35. ಈ ಕೆಳಗಿನ ಯಾವ ರಾಜ್ಯದ ಮೂಲಕ ಕರ್ಕಾಟಕ ಸಂಕ್ರಾಂತಿ ವೃತ್ತವು ಹಾದು ಹೋಗುವುದಿಲ್ಲ ?

(1) ಪಶ್ಚಿಮ ಬಂಗಾಳ
(2) ರಾಜಸ್ಥಾನ
(3) ಮಧ್ಯಪ್ರದೇಶ
(4) ಬಿಹಾರ

36. ಹೊಂದಿಸಿ ಬರೆಯಿರಿ.

| | ಪಟ್ಟಿ-I (ಸಿಮೆಂಟ್ ಉತ್ಪಾದನಾ ಘಟಕಗಳು) | | ಪಟ್ಟಿ-II (ರಾಜ್ಯಗಳು) |
|---|---|---|---|
| (a) | ಲಾಖೇರಿ | (i) | ತೆಲಂಗಾಣ |
| (b) | ವಿಜಯವಾಡ | (ii) | ರಾಜಸ್ಥಾನ |
| (c) | ರಾಮಗುಂಡಂ | (iii) | ಪಶ್ಚಿಮ ಬಂಗಾಳ |
| (d) | ದುರ್ಗಾಪುರ | (iv) | ಆಂಧ್ರಪ್ರದೇಶ |

ಸಂಕೇತಗಳು:

(1) a – ii, b – iii, c – i, d – iv
(2) a – iv, b – i, c – iii, d – ii
(3) a – ii, b – i, c – iii, d – iv
(4) a – ii, b – iv, c – i, d – iii

ಕಚ್ಚಾ ಕೆಲಸಕ್ಕೆ ಸ್ಥಳ



Scanned with OKEN Scanner

37. ವಿಶ್ವದಲ್ಲಿ ಅಧಿಕ ಸಂಚಾರ ದಟ್ಟಣೆಯನ್ನು ಹೊಂದಿರುವ ಒಳನಾಡಿನ ಜಲಮಾರ್ಗ

(1) ವೋಲ್ಗಾ ಒಳನಾಡಿನ ಜಲಮಾರ್ಗ

(2) ಡ್ಯಾನ್ಯೂಬ್ ಒಳನಾಡಿನ ಜಲಮಾರ್ಗ

(3) ಮಿಸ್ಸಿಸಿಪ್ಪಿ ಒಳನಾಡಿನ ಜಲಮಾರ್ಗ

(4) ರ್ಹೈನ್ ಒಳನಾಡಿನ ಜಲಮಾರ್ಗ

38. ದಿ ಸದರ್ನ್ ಟ್ರಾನ್ಸ್‌ಕಾಂಟಿನೆಂಟಲ್ ರೈಲ್ವೆ ಮಾರ್ಗ ಈ ಎರಡು ನಗರಗಳ ನಡುವೆ ಸಂಪರ್ಕ ಕಲ್ಪಿಸುತ್ತದೆ.

(1) ಸಿಯಾಟಲ್ ಮತ್ತು ನ್ಯೂಯಾರ್ಕ್

(2) ಲಾಸ್ ಏಂಜಲೀಸ್ ಮತ್ತು ನ್ಯೂಯಾರ್ಕ್

(3) ಸಾನ್‌ಫ್ರಾನ್ಸಿಸ್ಕೋ ಮತ್ತು ನ್ಯೂಯಾರ್ಕ್

(4) ವ್ಯಾಂಕೋವರ್ ಮತ್ತು ಹ್ಯಾಲಿಫಾಕ್ಸ್

39. ಈ ಕೆಳಗಿನವುಗಳಲ್ಲಿ ಹವಾಮಾನದ ಮೇಲೆ ಪ್ರಭಾವ ಬೀರದ ಅಂಶವನ್ನು / ಅಂಶಗಳನ್ನು ಗುರುತಿಸಿ.

(a) ಎತ್ತರ

(b) ರೇಖಾಂಶ

(c) ಅಕ್ಷಾಂಶ

(d) ಮಾರುತ

(1) (b) ಮಾತ್ರ　　(2) (b) ಮತ್ತು (d)

(3) (a), (b) ಮತ್ತು (c)　　(4) (a) ಮತ್ತು (d)

40. ಬೆಂಗಳೂರು ಮತ್ತು ಹೈದರಾಬಾದ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳು ನಗರಗಳಿಂದ ದೂರ ಇವೆ. ಆದ್ದರಿಂದ ಇವುಗಳನ್ನು ________ ವಿಮಾನ ನಿಲ್ದಾಣಗಳೆಂದು ಕರೆಯುವರು.

(1) ಪ್ರಯಾಣಿಕ ಕೇಂದ್ರಿತ　　(2) ಅರ್ಬನ್ ಸೆಂಟರ್

(3) ಗ್ರೀನ್ ಫೀಲ್ಡ್　　(4) ವಾಣಿಜ್ಯ ಕೇಂದ್ರಿತ

ಕಚ್ಚಾ ಕೆಲಸಕ್ಕೆ ಸ್ಥಳ



Scanned with OKEN Scanner

B2

41. ಭಾರತದ ಯಾವ ರಾಜ್ಯದಲ್ಲಿ ಬೋಡೋ/ಬೋರೋ ಭಾಷೆಯನ್ನು ಮುಖ್ಯವಾಗಿ ಮಾತನಾಡುತ್ತಾರೆ?

(1) ಅಸ್ಸಾಂ
(2) ಮಣಿಪುರ
(3) ಸಿಕ್ಕಿಂ
(4) ತ್ರಿಪುರಾ

42. ಡೆಕ್ಕನ್ ಎಜುಕೇಷನ್ ಸೊಸೈಟಿಗೆ ಸಂಬಂಧಪಟ್ಟ ವ್ಯಕ್ತಿಗಳನ್ನು ಗುರುತಿಸಿ.

(a) ಬಾಲ ಗಂಗಾಧರ ತಿಲಕ್
(b) ವಿ.ಕೆ. ಚಿಪ್ಲುಂಕರ್
(c) ತುಳಸಿರಾಮ್
(d) ಗೋಪಾಲ್ ಗಣೇಶ್ ಅಗರ್‌ಕರ್

ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

(1) (b), (c) ಮತ್ತು (d)
(2) (a) ಮತ್ತು (b)
(3) (a), (b) ಮತ್ತು (c)
(4) (a), (b) ಮತ್ತು (d)

43. ಹೊಂದಿಸಿ ಬರೆಯಿರಿ.

| | ಪಟ್ಟಿ-I (ಕರ್ತೃ) | | ಪಟ್ಟಿ-II (ಕೃತಿ) |
|---|---|---|---|
| (a) | ಮೊಹಮ್ಮದ್ ಇಕ್ಬಾಲ್ | (i) | ಬಂದೀ ಜೀವನ್ |
| (b) | ಲಾಲಾ ಲಜಪತ್ ರಾಯ್ | (ii) | ನೀಲ್‌ದರ್ಪಣ್ |
| (c) | ದೀನಬಂಧು ಮಿತ್ರ | (iii) | ದಿ ರಿಕನ್‌ಸ್ಟ್ರಕ್ಷನ್ ಆಫ್ ರಿಲೀಜಿಯಸ್ ಥಾಟ್ಸ್ ಇನ್ ಇಸ್ಲಾಂ |
| (d) | ಸಚೀಂದ್ರನಾಥ ಸನ್ಯಾಲ್ | (iv) | ಅನ್‌ಹ್ಯಾಪಿ ಇಂಡಿಯಾ |

ಸಂಕೇತಗಳು:

(1) a – ii, b – iii, c – iv, d – i
(2) a – iv, b – iii, c – ii, d – i
(3) a – iii, b – iv, c – ii, d – i
(4) a – ii, b – iv, c – i, d – iii

ಕಚ್ಚಾ ಕೆಲಸಕ್ಕೆ ಸ್ಥಳ



Scanned with OKEN Scanner

44. ಈ ಕೆಳಗಿನ ಘಟನೆಗಳನ್ನು ಸರಿಯಾದ ಕಾಲಾನುಕ್ರಮದಲ್ಲಿ ಗುರುತಿಸಿ.

(a) ಜಲಿಯನ್ ವಾಲಾಬಾಗ್ ದುರಂತ

(b) ಕ್ವಿಟ್ ಇಂಡಿಯಾ ಚಳವಳಿ

(c) ಬಂಗಾಳದ ವಿಭಜನೆ

(d) ಸೂರತ್ ವಿಭಜನೆ

(1) (d), (c), (a), (b)
(2) (a), (b), (c), (d)
(3) (b), (c), (d), (a)
(4) (c), (d), (a), (b)

45. "ಲೋಕಹಿತವಾದಿ" ಎಂದು ಯಾರು ಜನಪ್ರಿಯರಾಗಿದ್ದರು?

(1) ದಯಾನಂದ ಸರಸ್ವತಿ
(2) ಪಂಡಿತ ವಿದ್ಯಾಸಾಗರ
(3) ಗೋಪಾಲ್ ಹರಿ ದೇಶ್‌ಮುಖ
(4) ರಾಜಾ ರಾಮ್ ಮೋಹನ್ ರಾಯ್

46. ಈ ಕೆಳಗಿನ ಭಾರತದ ಯಾವ ಸ್ಥಳದಲ್ಲಿ ರೋಮನ್ನರು ಆಗಸ್ಟಸ್‌ನ ದೇವಾಲಯ ನಿರ್ಮಿಸಿದರು ಎಂದು ಹೇಳಲಾಗಿದೆ?

(1) ಮುಜ಼ಿರಿಸ್
(2) ಪಾಟಲೀಪುತ್ರ
(3) ಬಾದಾಮಿ
(4) ಹಳೇಬೀಡು

47. ಹೊಂದಿಸಿ ಬರೆಯಿರಿ.

| | ಪಟ್ಟಿ-I | | ಪಟ್ಟಿ-II |
|---|---|---|---|
| (a) | ಸೆಂಟ್ರಲ್ ಕಾಲೇಜು, ಬೆಂಗಳೂರು | (i) | ದ್ರಾವಿಡ ಶೈಲಿ |
| (b) | ಶಾರದಾಂಬಾ ದೇವಾಲಯ, ಶೃಂಗೇರಿ | (ii) | ಆಧುನಿಕ ಶೈಲಿ |
| (c) | ವಾಣಿವಿಲಾಸ ಆಸ್ಪತ್ರೆ, ಬೆಂಗಳೂರು | (iii) | ಇಂಡೋ-ಇಸ್ಲಾಮಿಕ್ ಶೈಲಿ |
| (d) | ಕಮಲ್ ಮಹಲ್, ಹಂಪಿ | (iv) | ಗೋಥಿಕ್ ಶೈಲಿ |

ಸಂಕೇತಗಳು:

(1) a – iv, b – i, c – ii, d – iii
(2) a – i, b – ii, c – iii, d – iv
(3) a – iv, b – iii, c – ii, d – i
(4) a – iii, b – ii, c – i, d – iv

ಕಚ್ಚಾ ಕೆಲಸಕ್ಕೆ ಸ್ಥಳ



Scanned with OKEN Scanner

48. ಈ ಕೆಳಗಿನ ಹೇಳಿಕೆಗಳಲ್ಲಿ ಯಾವ ಹೇಳಿಕೆಗಳು ಹೊಯ್ಸಳ ರಾಜ 'ವಿಷ್ಣುವರ್ಧನನಿಗೆ' ಸಂಬಂಧಿಸಿವೆ?

(a) ವಿಷ್ಣುವರ್ಧನನು 'ನೊಳಂಬವಾಡಿಗೊಂಡ' ಎಂಬ ಬಿರುದು ಹೊಂದಿದ್ದನು.

(b) ವಿಷ್ಣುವರ್ಧನನು ರಾಮಾನುಜಾಚಾರ್ಯರಿಗೆ ಆಶ್ರಯ ನೀಡಿದನು.

(c) ವಿಷ್ಣುವರ್ಧನನು ಚೋಳರಾಜಕುಮಾರಿ ಚೋಳ ಮಹಾದೇವಿಯನ್ನು ವಿವಾಹವಾಗಿದ್ದನು.

(d) ವಿಷ್ಣುವರ್ಧನನು ರಾಜಧಾನಿಯನ್ನು ದ್ವಾರಸಮುದ್ರಕ್ಕೆ ವರ್ಗಾಯಿಸಿದ್ದನು.

ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

(1) (a), (b) ಮತ್ತು (d)
(2) (a), (b) ಮತ್ತು (c)
(3) (a), (c) ಮತ್ತು (d)
(4) (b), (c) ಮತ್ತು (d)

49. ಕೃಷ್ಣದೇವರಾಯನ ಆಸ್ಥಾನದ ಅಷ್ಟದಿಗ್ಗಜರಲ್ಲಿ ಈ ಕೆಳಗಿನ ಯಾರು "ಸಂಗೀತ ಸಾಹಿತ್ಯ ಸಮರಾಂಗಣ ಸಾರ್ವಭೌಮ" ಎಂಬ ಬಿರುದು ಪಡೆದಿದ್ದರು?

(1) ತೆನಾಲಿ ರಾಮಕೃಷ್ಣ
(2) ಅಲ್ಲಸಾನಿ ಪೆದ್ದಣ್ಣ
(3) ಪಿಂಗಳಿ ಸೂರಣ್ಣ
(4) ನಂದಿ ತಿಮ್ಮಣ್ಣ

50. ಭಾರತದ ಮೇಲಿನ ಈ ಕೆಳಗಿನ ದಾಳಿಗಳನ್ನು ಕಾಲಾನುಕ್ರಮದಲ್ಲಿ ಹೊಂದಿಸಿ ಮತ್ತು ಕೆಳಗಿನ ಆಯ್ಕೆಗಳಿಂದ ಸರಿಯಾದ ಉತ್ತರ ಆರಿಸಿ.

(a) ಶಕರ ದಾಳಿ

(b) ಇಂಡೋ-ಗ್ರೀಕರ ದಾಳಿ

(c) ಕುಶಾನರ ದಾಳಿ

(d) ಪಾರ್ಥಿಯನ್ನರ ದಾಳಿ

(1) (a), (d), (c), (b)
(2) (d), (c), (b), (a)
(3) (c), (b), (a), (d)
(4) (b), (a), (d), (c)

ಕಚ್ಚಾ ಕೆಲಸಕ್ಕೆ ಸ್ಥಳ



Scanned with OKEN Scanner

51. ಈ ಕೆಳಗಿನ ಮೈಸೂರಿನ ದಿವಾನರನ್ನು ಕಾಲಾನುಕ್ರಮದಲ್ಲಿ ಜೋಡಿಸಿ.

(1) ಪಿ.ಎನ್. ಕೃಷ್ಣಮೂರ್ತಿ, ಟಿ. ಆನಂದರಾವ್, ವಿ.ಪಿ. ಮಾಧವರಾವ್

(2) ವಿ.ಪಿ. ಮಾಧವರಾವ್, ಟಿ. ಆನಂದರಾವ್, ಪಿ.ಎನ್. ಕೃಷ್ಣಮೂರ್ತಿ

(3) ಪಿ.ಎನ್. ಕೃಷ್ಣಮೂರ್ತಿ, ವಿ.ಪಿ. ಮಾಧವರಾವ್, ಟಿ. ಆನಂದರಾವ್

(4) ಟಿ. ಆನಂದರಾವ್, ಪಿ.ಎನ್. ಕೃಷ್ಣಮೂರ್ತಿ, ವಿ.ಪಿ. ಮಾಧವರಾವ್

52. ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:

ಹೇಳಿಕೆ-I: 1857ರ ದಂಗೆಯಲ್ಲಿ ಭಾರತೀಯ ಸೈನಿಕರು ಕಳಪೆಮಟ್ಟದ ಯುದ್ಧೋಪಕರಣಗಳನ್ನು ಹೊಂದಿದ್ದರು.

ಹೇಳಿಕೆ-II: ಬ್ರಿಟಿಷರು ಭಾರತಕ್ಕೆ ಅಪಾರ ಪ್ರಮಾಣದಲ್ಲಿ ಜನರು, ಹಣ ಮತ್ತು ಶಸ್ತ್ರಾಸ್ತ್ರಗಳನ್ನು ಕಳುಹಿಸಬೇಕಾಯಿತು.

ಈ ಕೆಳಗಿನವುಗಳಲ್ಲಿ ಸರಿಯಾದ ಆಯ್ಕೆಯನ್ನು ಆರಿಸಿ.

(1) ಹೇಳಿಕೆ-I ತಪ್ಪಾಗಿದೆ, ಆದರೆ ಹೇಳಿಕೆ-II ಸರಿಯಾಗಿದೆ.

(2) ಹೇಳಿಕೆ-I ಮತ್ತು ಹೇಳಿಕೆ-II ಎರಡೂ ಸರಿಯಾಗಿವೆ ಹಾಗೂ ಹೇಳಿಕೆ-II, ಹೇಳಿಕೆ-Iಕ್ಕೆ ಸಂಬಂಧಿಸಿದೆ.

(3) ಹೇಳಿಕೆ-I ಮತ್ತು ಹೇಳಿಕೆ-II ಎರಡೂ ಸರಿಯಾಗಿವೆ, ಆದರೆ ಹೇಳಿಕೆ-II, ಹೇಳಿಕೆ-Iಕ್ಕೆ ಸಂಬಂಧಿಸಿಲ್ಲ .

(4) ಹೇಳಿಕೆ-I ಸರಿಯಾಗಿದೆ, ಆದರೆ ಹೇಳಿಕೆ-II ತಪ್ಪಾಗಿದೆ.

53. ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ:

ಹೇಳಿಕೆ-I: ರಣಜಿತ್ ಸಿಂಗ್ ಅವರು ನಿರಂಕುಶ ಪ್ರಭುವಾಗಿದ್ದ ಕಾರಣ ಸಿಖ್ಖರು ಇಂಗ್ಲೀಷರ ವಿರುದ್ಧ ಸೋತರು.

ಹೇಳಿಕೆ-II: ಬ್ರಿಟಿಷರ ಆಕ್ರಮಣಗಳಿಂದ ಸಿಖ್ ಸಾಮ್ರಾಜ್ಯವನ್ನು ರಕ್ಷಿಸಲು ಅವರು ವಿಫಲರಾದರು.

ಈ ಕೆಳಗಿನವುಗಳಲ್ಲಿ ಸರಿಯಾದ ಆಯ್ಕೆಯನ್ನು ಆರಿಸಿ.

(1) ಹೇಳಿಕೆ-I ತಪ್ಪಾಗಿದೆ, ಆದರೆ ಹೇಳಿಕೆ-II ಸರಿಯಾಗಿದೆ.

(2) ಹೇಳಿಕೆ-I ಮತ್ತು ಹೇಳಿಕೆ-II ಎರಡೂ ಸರಿಯಾಗಿವೆ ಹಾಗೂ ಹೇಳಿಕೆ-II, ಹೇಳಿಕೆ-Iಕ್ಕೆ ಸಂಬಂಧಿಸಿದೆ.

(3) ಹೇಳಿಕೆ-I ಮತ್ತು ಹೇಳಿಕೆ-II ಎರಡೂ ಸರಿಯಾಗಿವೆ, ಆದರೆ ಹೇಳಿಕೆ-II, ಹೇಳಿಕೆ-Iಕ್ಕೆ ಸಂಬಂಧಿಸಿಲ್ಲ .

(4) ಹೇಳಿಕೆ-I ಸರಿಯಾಗಿದೆ, ಆದರೆ ಹೇಳಿಕೆ-II ತಪ್ಪಾಗಿದೆ.

ಕಚ್ಚಾ ಕೆಲಸಕ್ಕೆ ಸ್ಥಳ



Scanned with OKEN Scanner

54. ಕ್ರಿ.ಪೂ. (BCE) 6ನೇ ಶತಮಾನದ ಗಣರಾಜ್ಯಗಳನ್ನು ಅವುಗಳ ರಾಜಧಾನಿಗಳೊಂದಿಗೆ ಹೊಂದಿಸಿ:

| ಪಟ್ಟಿ-I (ಗಣರಾಜ್ಯ) | ಪಟ್ಟಿ-II (ರಾಜಧಾನಿ) |
|---|---|
| (a) ಅವಂತಿ | (i) ಕೌಶಾಂಬಿ |
| (b) ಕೋಸಲ | (ii) ರಾಜಗೃಹ |
| (c) ವತ್ಸ | (iii) ಉಜ್ಜೈನಿ |
| (d) ಮಗಧ | (iv) ಅಯೋಧ್ಯಾ |

ಸಂಕೇತಗಳು:

(1) a – i, b – ii, c – iii, d – iv

(2) a – ii, b – i, c – iv, d – iii

(3) a – iii, b – ii, c – i, d – iv

(4) a – iii, b – iv, c – i, d – ii

55. ಈ ಕೆಳಗಿನವರಲ್ಲಿ ಯಾರು ಋಗ್ವೇದ ಕಾಲದ ಪ್ರಮುಖ ದೇವತೆಯಲ್ಲ ?

(1) ಸೋಮ

(2) ಅಗ್ನಿ

(3) ಪ್ರಜಾಪತಿ

(4) ವರುಣ

56. ಬಾಲ್ಯವಿವಾಹ ತಡೆಗಟ್ಟುವ ಕಾಯ್ದೆಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಹೇಳಿಕೆ-I: ಬಾಲ್ಯ ವಿವಾಹ ತಡೆಗಟ್ಟುವ ಕಾಯ್ದೆ 1929ರಲ್ಲಿ ಜಾರಿಯಾಯಿತು, ಇದು 'ಶಾರದಾ' ಕಾಯ್ದೆ ಎಂದು ಪ್ರಸಿದ್ಧವಾಗಿದೆ.

ಹೇಳಿಕೆ-II: ಇದು ಬಾಲಕರ ಮತ್ತು ಬಾಲಕಿಯರ ಮದುವೆ ವಯಸ್ಸನ್ನು ಕ್ರಮವಾಗಿ 18 ಮತ್ತು 14ಕ್ಕೆ ನಿಗದಿ ಪಡಿಸಿತು.

(1) ಹೇಳಿಕೆ-I ತಪ್ಪು ಆದರೆ ಹೇಳಿಕೆ-II ಸರಿ.

(2) ಹೇಳಿಕೆ-I ಮತ್ತು ಹೇಳಿಕೆ-II ಎರಡೂ ಸರಿ, ಮತ್ತು ಹೇಳಿಕೆ-I ನ್ನು ಹೇಳಿಕೆ-II ವಿವರಿಸುತ್ತದೆ.

(3) ಹೇಳಿಕೆ-I ಮತ್ತು ಹೇಳಿಕೆ-II ಎರಡೂ ಸರಿ ಆದರೆ ಹೇಳಿಕೆ-I ನ್ನು ಹೇಳಿಕೆ-II ವಿವರಿಸುವುದಿಲ್ಲ.

(4) ಹೇಳಿಕೆ-I ಸರಿ ಆದರೆ ಹೇಳಿಕೆ-II ತಪ್ಪು.

---

ಕಚ್ಚಾ ಕೆಲಸಕ್ಕೆ ಸ್ಥಳ



Scanned with OKEN Scanner

57. ಈ ಕೆಳಗಿನ ಯಾವ ಕೃತಿಯಲ್ಲಿ ರಾಜಾ ಹರ್ಷವರ್ಧನನನ್ನು ಭಾಸ ಮತ್ತು ಕಾಳಿದಾಸರಿಗೆ ಹೋಲಿಸಲಾಗಿದೆ?

(1) ಹ್ಯೂಯನತ್ಸಾಂಗನ "ಸಿ.ಯು.ಕಿ."ಯಲ್ಲಿ

(2) ಜಯದೇವನ "ಗೀತಗೋವಿಂದ"ದಲ್ಲಿ

(3) ಬಾಣಭಟ್ಟನ "ಹರ್ಷಚರಿತೆ" ಯಲ್ಲಿ

(4) ಮಯೂರನ "ಸೂರ್ಯಶತಕ" ದಲ್ಲಿ

58. ಈ ಕೆಳಗಿನ ಚೋಳ ಅರಸರಲ್ಲಿ ಶ್ರೀಲಂಕಾದ ಮೇಲೆ ದಾಳಿ ಮಾಡದವರು ಯಾರು?

(1) Iನೇ ರಾಜೇಂದ್ರ
(2) ಕರಿಕಾಲ
(3) Iನೇ ಆದಿತ್ಯ
(4) Iನೇ ರಾಜರಾಜ

59. ಈ ಕೆಳಗಿನ ಸ್ಮಾರಕಗಳಲ್ಲಿ ಯಾವುದು ಷೇರ್‌ಷಾ ಸೂರಿಯಿಂದ ನಿರ್ಮಾಣಗೊಂಡಿಲ್ಲ?

(1) ರೋಹತ್ಸ್‌ಫುರ್ ಕೋಟೆ
(2) ಸಸಾರಾಂ ಸಮಾಧಿ
(3) ಪುರಾನಾ ಕಿಲಾ
(4) ಕುಷ್ಕ್-ಇ-ಸಿರಿ

60. ಈ ಕೆಳಗಿನವುಗಳನ್ನು ಹೊಂದಿಸಿ, ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

| ಪಟ್ಟಿ-I | ಪಟ್ಟಿ-II |
|---|---|
| (a) ಗುರು ರಾಮದಾಸ | (i) ಅಕಾಲ್‌ತಖ್ತ್ ಸ್ಥಾಪನೆ |
| (b) ಗುರು ಅರ್ಜುನದೇವ | (ii) ಆದಿಗ್ರಂಥವನ್ನು ಸಂಕಲಿಸಿದರು |
| (c) ಗುರು ಹರಗೋವಿಂದ | (iii) ಖಾಲ್ಸಾ ಸ್ಥಾಪನೆ |
| (d) ಗುರುಗೋವಿಂದ ಸಿಂಗ್ | (iv) ಅಮೃತಸರ ನಗರ ಸ್ಥಾಪಿಸಿದರು |

ಸಂಕೇತಗಳು:


(1) a – iv, b – ii, c – i, d – iii
(2) a – i, b – ii, c – iii, d – iv
(3) a – iv, b – i, c – iii, d – ii
(4) a – iii, b – iv, c – ii, d – i

ಕಚ್ಚಾ ಕೆಲಸಕ್ಕೆ ಸ್ಥಳ



Scanned with OKEN Scanner

61. ಪ್ರತಿಯೊಂದು ಆಕೃತಿಯನ್ನು ಒಮ್ಮೆ ಮಾತ್ರ ಬಳಸಿಕೊಂಡು ಕೊಟ್ಟಿರುವ ಆಕೃತಿಗಳನ್ನು ಮೂರು ವರ್ಗಗಳ ಗುಂಪುಗಳಾಗಿ ಮಾಡಿ.





(1) 3,2,4 ; 6,5,8 ; 7,9,1

(2) 1,3,5 ; 2,6,8 ; 4,7,9

(3) 1,3,5 ; 2,6,9 ; 4,7,8

(4) 2,3,4 ; 5,6,8 ; 9,1,7

62. ಪ್ರಶ್ನಾರ್ಥಕ ಚಿಹ್ನೆ(?)ಯ ಜಾಗದಲ್ಲಿ ಬರುವ ಸಂಖ್ಯೆಯನ್ನು ಗುರುತಿಸಿ.




(1) 66

(2) 75

(3) 68

(4) 56

63. ಒಂದು ಶಂಕುವಿನ ವಕ್ರ ಮೇಲ್ಮೈ ವಿಸ್ತೀರ್ಣವು 528 $cm^2$ ಹಾಗೂ ಅದರ ಓರೆ ಎತ್ತರ 12 cm ಆಗಿದ್ದರೆ, ಶಂಕುವಿನ ತ್ರಿಜ್ಯವು

(1) 10 cm

(2) 16 cm

(3) 14 cm

(4) 12 cm

64. L ಎಂದರೆ 'ಪ್ಲಸ್', M ಎಂದರೆ 'ಮೈನಸ್' ಮತ್ತು N ಎಂದರೆ 'ಮೈನಸ್' ಎಂದಾದರೆ, 1L9M9N1 = ?

(1) 0

(2) 1

(3) –1


(4) 2

ಕಚ್ಚಾ ಕೆಲಸಕ್ಕೆ ಸ್ಥಳ





Scanned with OKEN Scanner


65. ಪ್ರಶ್ನೆ ಚಿತ್ರ:





ಕೆಳಗಿನ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ.


(1) 


(2) 


(3) 


(4) 


66. ಕೆಳಗಿನ ಸ್ತಂಭಲೇಖಾ ನಕ್ಷೆಯು ಮೈಸೂರು ಜಿಲ್ಲೆಯಲ್ಲಿ ಬೇರೆ ಬೇರೆ ವರ್ಷಗಳಲ್ಲಿ ಉತ್ಪಾದನೆಯಾದ ರಾಗಿ ಬೆಳೆಯನ್ನು ಸೂಚಿಸುತ್ತದೆ (1000 ಕ್ವಿಂಟಾಲ್‌ಗಳಲ್ಲಿ).




ಹಾಗಾದರೆ 2019 ಮತ್ತು 2020ರ ನಡುವೆ ಏರಿಕೆಯಾದ ಶೇಕಡಾವಾರು ರಾಗಿ ಬೆಳೆಯ ಉತ್ಪಾದನೆ ಎಷ್ಟು ?

(1) 15%
(2) 50%
(3) 5%
(4) 10%

ಕಚ್ಚಾ ಕೆಲಸಕ್ಕೆ ಸ್ಥಳ



Scanned with OKEN Scanner

67. ಒಂದು ಕಾರಿನ ವೇಗವನ್ನು ಪ್ರತಿ 30 ನಿಮಿಷಕ್ಕೆ 2 ಕಿ.ಮೀ.ನಂತೆ ಹೆಚ್ಚಿಸಲಾಗುತ್ತದೆ. ಮೊದಲ ಒಂದು ಗಂಟೆ ಅವಧಿಯಲ್ಲಿ ಕಾರು 35 ಕಿ.ಮೀ. ದೂರವನ್ನು ಕ್ರಮಿಸಿದ್ದರೆ, 7 ಗಂಟೆ ಅವಧಿಯಲ್ಲಿ ಅದು ಕ್ರಮಿಸಿದ ದೂರವನ್ನು ಕಂಡುಹಿಡಿಯಿರಿ.

(1) 287 ಕಿ.ಮೀ.
(2) 270 ಕಿ.ಮೀ.
(3) 297 ಕಿ.ಮೀ.
(4) 329 ಕಿ.ಮೀ.

68. ₹500ರ ಮೇಲಿನ ಏಕಕಾಲಿಕ 40% ರಿಯಾಯತಿ ಮತ್ತು ಅದೇ ಮೊತ್ತದ ಮೇಲೆ 30% ಹಾಗೂ 10% ಎಂಬ ಸತತ ಎರಡು ರಿಯಾಯತಿಗಳ ನಡುವಿನ ವ್ಯತ್ಯಾಸ ಎಷ್ಟಾಗುತ್ತದೆ?

(1) ₹0
(2) ₹20
(3) ₹10
(4) ₹15

69. ಪ್ರಕಾಶನು ರಂಗಮಂದಿರಕ್ಕೆ ಹೋಗಲು ಬಯಸುತ್ತಾನೆ. ಪೂರ್ವದಲ್ಲಿರುವ ತನ್ನ ಮನೆಯಿಂದ ಪ್ರಾರಂಭಿಸುತ್ತಾನೆ ಮತ್ತು ಒಂದು ಅಡ್ಡ ರಸ್ತೆ ಕೂಡುವಿಕೆ (ಕ್ರಾಸಿಂಗ್)ಗೆ ಬರುತ್ತಾನೆ. ಬಲಕ್ಕೆ ಹೋಗುವ ರಸ್ತೆ ವಿಶ್ವವಿದ್ಯಾಲಯದಲ್ಲಿ ಕೊನೆಗೊಳ್ಳುತ್ತದೆ. ನೇರವಾಗಿ ಮುಂದೆ ಆಸ್ಪತ್ರೆ ಇದೆ. ರಂಗಮಂದಿರ ಯಾವ ದಿಕ್ಕಿನಲ್ಲಿದೆ?

(1) ಪೂರ್ವ
(2) ಉತ್ತರ
(3) ದಕ್ಷಿಣ
(4) ಪಶ್ಚಿಮ

70. ಕೆಳಗಿನ ಪದಗಳನ್ನು ಪದಕೋಶ(ಡಿಕ್ಷನರಿ)ದ ಕ್ರಮದಲ್ಲಿ ಬರೆದಾಗ ಮೂರನೇ ಸ್ಥಾನದಲ್ಲಿ ಬರುವ ಪದವನ್ನು ಗುರುತಿಸಿ.

(a) Continuous
(b) Cauvery
(c) Controversy
(d) Casual
(e) Control

(1) Casual
(2) Continuous
(3) Cauvery
(4) Controversy

ಕಚ್ಚಾ ಕೆಲಸಕ್ಕೆ ಸ್ಥಳ



Scanned with OKEN Scanner

71. ಕೆಳಗಿನ ಪ್ರಶ್ನೆಯಲ್ಲಿ ಹೇಳಿಕೆ ಮತ್ತು ತೀರ್ಮಾನಗಳಿದ್ದು, ಎಲ್ಲಾ ತೀರ್ಮಾನಗಳನ್ನು ಓದಿ ಹೇಳಿಕೆಗೆ ಸೂಕ್ತವಾದ ತೀರ್ಮಾನವನ್ನು ಗುರುತಿಸಿ.

ಹೇಳಿಕೆ-I: ಕೆಲವರು ಗಣಿತದಲ್ಲಿ ದುರ್ಬಲರಾಗಿರುತ್ತಾರೆ.

ಹೇಳಿಕೆ-II: ಗಣಿತದಲ್ಲಿ ದುರ್ಬಲರಾಗಿರುವವರೆಲ್ಲರೂ ಸಂಗೀತಗಾರರೇ.

ತೀರ್ಮಾನ : ಕೆಲವು ಸಂಗೀತಗಾರರು ಗಣಿತದಲ್ಲಿ ದುರ್ಬಲರಾಗಿದ್ದಾರೆ.

(1) ಖಂಡಿತವಾಗಿ ತಪ್ಪು
(2) ಖಂಡಿತವಾಗಿಯೂ ನಿಜ.
(3) ಅಪ್ರಸ್ತುತ.
(4) ಬಹುಶಃ ನಿಜ.

72. 14 ಆಗಸ್ಟ್, 2010 ವಾರದ ಯಾವ ದಿನವಾಗಿತ್ತು?

(1) ಶುಕ್ರವಾರ
(2) ಶನಿವಾರ
(3) ಸೋಮವಾರ
(4) ಆದಿತ್ಯವಾರ

73. ಸ್ಥಳೀಯ ರೈಲುಗಳು 12 km/hr ವೇಗದಲ್ಲಿ 20 ನಿಮಿಷಗಳ ಅಂತರದಲ್ಲಿ ನಿಲ್ದಾಣದಿಂದ ಹೊರಡುತ್ತವೆ. ಎದುರಿನಿಂದ ಚಲಿಸುವ ವ್ಯಕ್ತಿಯು 12 ನಿಮಿಷಗಳ ಅಂತರದಲ್ಲಿ ರೈಲುಗಳನ್ನು ಭೇಟಿಯಾಗುತ್ತಾನೆ. ಹಾಗಾದರೆ ಆ ಮನುಷ್ಯನ ವೇಗವು

(1) 8 km/hr
(2) 4 km/hr
(3) 3 km/hr
(4) 5 km/hr

74. Q, B, A, P, Y ಮತ್ತು R ಇವರು ಒಂದೇ ಸಾಲಿನಲ್ಲಿ ಇದ್ದಾರೆ. Y ಮತ್ತು R ಮಧ್ಯದಲ್ಲಿದ್ದಾರೆ. Q ಮತ್ತು B ಗಳು ಕೊನೆಯಲ್ಲಿದ್ದಾರೆ. P ಯು Q ನ ಎಡಭಾಗದಲ್ಲಿ ಕುಳಿತಿದ್ದಾನೆ. B ಯ ಬಲಭಾಗದಲ್ಲಿ ಯಾರು ಇದ್ದಾರೆ?

(1) P
(2) A
(3) Y
(4) R

ಕಚ್ಚಾ ಕೆಲಸಕ್ಕೆ ಸ್ಥಳ



Scanned with OKEN Scanner

75. ಒಂದು ನಿರ್ದಿಷ್ಟ ಕೋಡ್ ಭಾಷೆಯಲ್ಲಿ "HEART" ಅನ್ನು "SVZIG" ಎಂದು ಬರೆಯಲಾಗಿದ್ದರೆ, ಅದೇ ಕೋಡ್‌ನಲ್ಲಿ "MIND"ಅನ್ನು ಹೇಗೆ ಬರೆಯಬಹುದು?

(1) MNRW (2) RMNW

(3) NRMW (4) WMRN

76. ಹೊಸದಾಗಿ ಮರು ಆಯ್ಕೆಯಾದ ರಾಜ್ಯಸಭಾ ಸದಸ್ಯರು ಪಟ್ಟಿ-I ರಲ್ಲಿದ್ದು, ಇದನ್ನು, ಅವರು ಆಯ್ಕೆಯಾದ ಪಟ್ಟಿ-II ರಲ್ಲಿರುವ ರಾಜ್ಯಗಳೊಂದಿಗೆ ಸರಿಯಾಗಿ ಹೊಂದಿಸಿ.

| ಪಟ್ಟಿ-I | | ಪಟ್ಟಿ-II | |
|---|---|---|---|
| (a) | ಮಾನ್‌ಸಿಂಗ್ ಮೆರ್ಮಾನ್ ಪರ್ಮಾರ್ | (i) | ರಾಜಸ್ಥಾನ್ |
| (b) | ಅಲ್ಕಾ ಸಿಂಗ್ | (ii) | ಮಹಾರಾಷ್ಟ್ರ |
| (c) | ತರುಣ್ ಚುಗ್ | (iii) | ಮಧ್ಯಪ್ರದೇಶ್ |
| (d) | ರಾಜೇಂದ್ರ ಹೀರಾಲಾಲ್ ಜೈನ್ | (iv) | ಗುಜರಾತ್ |

ಸಂಕೇತಗಳು:

(1) a – iv, b – iii, c – ii, d – i (2) a – i, b – ii, c – iii, d – iv

(3) a – i, b – iii, c – ii, d – iv (4) a – iv, b – ii, c – iii, d – i

77. 'ಆಗಮನ್' ಎಂಬುದು ______

(1) ಭಾರತದ ಮೊದಲ ಆಳ ಸಮುದ್ರ ಅಧ್ಯಯನ ಮಿಷನ್

(2) ಭಾರತದ ಮೊದಲ ಹಳೆಯ ಉಪಗ್ರಹಗಳ ವಿಲೇವಾರಿ ಮಿಷನ್

(3) ಭಾರತದ ಮೊದಲ ಖಾಸಗಿ ಕಕ್ಷೆಯ ರಾಕೆಟ್ ಮಿಷನ್

(4) ಭಾರತದ ಮೊದಲ ನಕ್ಷತ್ರಗಳ ಅಧ್ಯಯನ ಮಿಷನ್

ಕಚ್ಚಾ ಕೆಲಸಕ್ಕೆ ಸ್ಥಳ

78. JSJB 2.0 ನ್ನು ವಿಸ್ತರಿಸಿ.

(1) ಜಲ್ ಸಂಚಯ್ ಜೀವನ್ ಭಾಗೀದಾರಿ 2.0

(2) ಜಲ್ ಸಂಚಯ್ ಜನ್ ಭಾಗೀದಾರಿ 2.0

(3) ಜನ್ ಸಂಚಯ್ ಜಲ್ ಭಾಗೀದಾರಿ 2.0

(4) ಜೀವನ್ ಸಂಚಯ್ ಜನ್ ಭಾಗೀದಾರಿ 2.0

79. 2026ರ ಅಂತರರಾಷ್ಟ್ರೀಯ ಸಹಕಾರ ದಿನದ ಧ್ಯೇಯ ವಾಕ್ಯ ಏನು?

(1) ಸುಸ್ಥಿರ ಅನುಭೋಗ ಮತ್ತು ಉತ್ಪಾದನೆ.

(2) ಸಹಕಾರ ಸಂಘಗಳು ಎಲ್ಲರಿಗೂ ಉತ್ತಮ ಭವಿಷ್ಯ ರೂಪಿಸುತ್ತವೆ.

(3) ಸಹಕಾರ ಸಂಘಗಳು: ವೇಗವರ್ಧಿತ ಸುಸ್ಥಿರ ಅಭಿವೃದ್ಧಿಯ ಪಾಲುದಾರರು.

(4) ಶಾಂತಿಯುತ ಜಗತ್ತಿಗಾಗಿ ಸಹಕಾರ ಸಂಘಗಳು.

80. ಗ್ರೇಟರ್ ಬೆಂಗಳೂರು ಪ್ರಾಧಿಕಾರ (GBA)ಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ/ಗಳು ಸರಿಯಾಗಿದೆ/ವೆ?

(a) ಇದನ್ನು ಮೇ 15, 2025 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಬದಲಿಗೆ ಸ್ಥಾಪಿಸಲಾಯಿತು.

(b) ಜಿಬಿಎ ಸಂಪೂರ್ಣ ಗ್ರೇಟರ್ ಬೆಂಗಳೂರು ನಗರ ಸಮೂಹದ ಉಸ್ತುವಾರಿ ವಹಿಸುತ್ತದೆ.

(c) ಕರ್ನಾಟಕ ಸರ್ಕಾರವು 2025ರ ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆಯನ್ನು ಜಾರಿಗೆ ತಂದು, ಜಿಬಿಎಯನ್ನು ರಚಿಸಿತು.

(1) (c) ಮಾತ್ರ
(2) (a) ಮತ್ತು (b)
(3) (a), (b) ಮತ್ತು (c)
(4) (b) ಮತ್ತು (c)

81. ಇತ್ತೀಚೆಗೆ ಸಿಕ್ಕಿಂ, ಸಂಪೂರ್ಣ ಸಾಕ್ಷರತಾ ರಾಜ್ಯ ಎಂದು ಯಾವ ಕಾರ್ಯಕ್ರಮದಡಿ ಘೋಷಿಸಲ್ಪಟ್ಟಿದೆ?

(1) ಉತ್ಕರ್ಷ್
(2) ಉತ್ತಮ್
(3) ಉತ್ಸಾಹ್
(4) ಉಲ್ಲಾಸ್

ಕಚ್ಚಾ ಕೆಲಸಕ್ಕೆ ಸ್ಥಳ



Scanned with OKEN Scanner

82. SEHAT ವಿಸ್ತರಿಸಿ.

(1) ಸೈನ್ಸ್ ಎಕ್ಸಿಬಿಷನ್ ಫಾರ್ ಹೆಲ್ತ್ ಥ್ರೂ ಆಯುಷ್ ಟ್ರಾನ್ಸ್‌ಫಾರ್ಮೇಶನ್.

(2) ಸ್ಕೂಲ್ ಎಜುಕೇಷನ್ ಫಾರ್ ಹೆಲ್ತ್ ಥ್ರೂ ಅಗ್ರಿಕಲ್ಚರಲ್ ಟ್ರಾನ್ಸ್‌ಫಾರ್ಮೇಶನ್

(3) ಸೈನ್ಸ್ ಎಕ್ಸಲೆನ್ಸ್ ಫಾರ್ ಹ್ಯೂಮ್ಯಾನಿಟಿ ಥ್ರೂ ಅಗ್ರಿಕಲ್ಚರಲ್ ಟ್ರಾನ್ಸ್‌ಫಾರ್ಮೇಶನ್

(4) ಸೈನ್ಸ್ ಎಕ್ಸಲೆನ್ಸ್ ಫಾರ್ ಹೆಲ್ತ್ ಥ್ರೂ ಅಗ್ರಿಕಲ್ಚರಲ್ ಟ್ರಾನ್ಸ್‌ಫಾರ್ಮೇಶನ್.

83. ಪಂಡಿತ್ ದೀನದಯಾಳ ಉಪಾಧ್ಯಾಯ ರಾಷ್ಟ್ರೀಯ ಸಾಮಾಜಿಕ ಭದ್ರತಾ ಅಕಾಡೆಮಿಯನ್ನು 1990ರಲ್ಲಿ ಸ್ಥಾಪಿಸಲಾಯಿತು. ಇದು ಕೆಳಗಿನ ಯಾವುದರ ಅತ್ಯುನ್ನತ ತರಬೇತಿ ಸಂಸ್ಥೆಯಾಗಿದೆ?

(1) ನೌಕರರ ಭವಿಷ್ಯ ನಿಧಿ ಸಂಸ್ಥೆ

(2) ಇನ್ಸ್ಟಿಟ್ಯೂಟ್ ಆಫ್ ಸೆಕ್ರೆಟರಿಯೇಟ್ ಟ್ರೇನಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್

(3) ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ

(4) ಸಿಬ್ಬಂದಿ ಮತ್ತು ತರಬೇತಿ ಇಲಾಖೆ

84. ಜನರಲ್ ಎನ್.ಎಸ್. ರಾಜಾ ಸುಬ್ರಹ್ಮಣಿ ಅವರು 2026ರ ಮೇ 31ರಂದು ಭಾರತೀಯ ಸಶಸ್ತ್ರ ಪಡೆಗಳ ಮೂರನೇ ಚೀಫ್ ಆಫ್ ಡಿಫೆನ್ಸ್ ಸ್ಟಾಫ್ (CDS)ಆಗಿ ಅಧಿಕಾರ ಸ್ವೀಕರಿಸಿದರು. ಹಾಗಾದರೆ ಎರಡನೇ ಚೀಫ್ ಆಫ್ ಡಿಫೆನ್ಸ್ ಸ್ಟಾಫ್ ಯಾರು?

(1) ಜನರಲ್ ಮನೋಜ್ ಪಾಂಡೆ

(2) ಜನರಲ್ ಅನಿಲ್ ಚೌಹಾಣ್

(3) ಜನರಲ್ ಬಿಪಿನ್ ರಾವತ್

(4) ಜನರಲ್ ಉಪೇಂದ್ರ ದ್ವಿವೇದಿ

ಕಚ್ಚಾ ಕೆಲಸಕ್ಕೆ ಸ್ಥಳ



Scanned with OKEN Scanner

85. 2026ರ ಏಪ್ರಿಲ್‌ನಲ್ಲಿ ಭಾರತದ ಉಪರಾಷ್ಟ್ರಪತಿ ಶ್ರೀ ಸಿ.ಪಿ. ರಾಧಾಕೃಷ್ಣನ್ ಅವರು ಭಾರತದ ಸಂವಿಧಾನದ ಸಿಂಧಿ ಭಾಷೆಯ ಇತ್ತೀಚಿನ ಆವೃತ್ತಿಯನ್ನು ಬಿಡುಗಡೆ ಮಾಡಿದರು. ಅದನ್ನು ಕೆಳಗಿನ ಯಾವ ಎರಡು ಲಿಪಿಗಳಲ್ಲಿ ಪ್ರಕಟಿಸಲಾಗಿದೆ?

(a) ದೇವನಾಗರಿ
(b) ಗುರುಮುಖಿ
(c) ಪರ್ಷಿಯನ್
(d) ಗುಜರಾತಿ

ಸಂಕೇತಗಳು:

(1) (a) ಮತ್ತು (c)
(2) (b) ಮತ್ತು (d)
(3) (b) ಮತ್ತು (c)
(4) (a) ಮತ್ತು (d)

86. ಈ ಕೆಳಗಿನ ಯಾವ ಸನ್ನಿವೇಶದಲ್ಲಿ ಸರ್ಕಾರಿ ನೌಕರನು ಗೌಪ್ಯತೆಯ ಕರ್ತವ್ಯವನ್ನು ಉಲ್ಲಂಘಿಸುತ್ತಾನೆ ಎನ್ನಲಾಗುತ್ತದೆ?

(1) ಕಾನೂನಿನಿಂದ ಬಹಿರಂಗ ಪಡಿಸುವಿಕೆಯ ಅಗತ್ಯವಿದ್ದಾಗ
(2) ಮಾಹಿತಿಯನ್ನು ಅಧಿಕೃತ ಅನುಮತಿಯಿಲ್ಲದೇ ಸಂಬಂಧಿಕರೊಂದಿಗೆ ಹಂಚಿಕೊಂಡಾಗ
(3) ತಿಳಿದುಕೊಳ್ಳಲೇಬೇಕಾದ ಆಧಾರದ ಮೇಲೆ ಸಹೋದ್ಯೋಗಿಯೊಂದಿಗೆ ಮಾಹಿತಿಯನ್ನು ಬಹಿರಂಗಪಡಿಸಿದಾಗ
(4) ಅವನು/ಅವಳು RTI ಅಡಿಯಲ್ಲಿ ಮಾಹಿತಿ ಬಹಿರಂಗಪಡಿಸಿದಾಗ

87. ಸಂಸ್ಥೆಯೊಳಗಿನ ತಪ್ಪು, ಕಾನೂನು ಬಾಹಿರ ಅಥವಾ ಅನೈತಿಕ ಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ಉದ್ಯೋಗಿ ಅಥವಾ ಒಳಗಿನವರು ಬಹಿರಂಗ ಪಡಿಸುವುದನ್ನು ಹೀಗೆಂದು ಕರೆಯಲಾಗುತ್ತದೆ.

(1) ಡಿಸಿಪ್ಲಿನಿಂಗ್
(2) ವಿಶ಼ಲ್ ಬ್ಲೋಯಿಂಗ್
(3) ವಿಂಡ್ ಬ್ಲೋಯಿಂಗ್
(4) ವಿಸ್ಪರಿಂಗ್

88. 1995 ರ ನೋಲನ್ ಸಮಿತಿಯ ಮೂಲಭೂತ ತತ್ವಗಳನ್ನು ಭಾರತೀಯ ನಾಗರಿಕ ಸೇವೆಗಳಲ್ಲಿ ನೈತಿಕ ಮಾರ್ಗಸೂಚಿಗಳಾಗಿ ವ್ಯಾಪಕವಾಗಿ ಸಂಯೋಜಿಸಲಾಗಿದೆ. ನೋಲನ್ ತತ್ವಗಳನ್ನು ಜನಪ್ರಿಯವಾಗಿ ಹೀಗೆ ಕರೆಯಲಾಗುತ್ತದೆ.

(1) ಸಾರ್ವಜನಿಕ ಜೀವನದ ಎಂಟು ಮೂಲತತ್ವಗಳು.
(2) ಸಾರ್ವಜನಿಕ ಜೀವನದ ಐದು ಮೂಲತತ್ವಗಳು.
(3) ಸಾರ್ವಜನಿಕ ಜೀವನದ ಒಂಭತ್ತು ಮೂಲತತ್ವಗಳು.
(4) ಸಾರ್ವಜನಿಕ ಜೀವನದ ಏಳು ಮೂಲತತ್ವಗಳು.

ಕಚ್ಚಾ ಕೆಲಸಕ್ಕೆ ಸ್ಥಳ



Scanned with OKEN Scanner

89. ಜಾತ್ಯಾತೀತ, ಪ್ರಜಾಪ್ರಭುತ್ವ ರಾಷ್ಟ್ರದ ಸದಸ್ಯರಾಗಿ ಪೋಲೀಸರು ಈ ಕೆಳಗಿನ ಯಾವ ಅಂಶಗಳಿಗಿಂತ ಮೇಲೇರಲು ನಿರಂತರವಾಗಿ ಶ್ರಮಿಸಬೇಕು?

(1) ಸಾಮರಸ್ಯ
(2) ಉನ್ನತ ಮಟ್ಟದ ಶಿಸ್ತು
(3) ಸಾರ್ವತ್ರಿಕ ಭ್ರಾತೃತ್ವ
(4) ವೈಯಕ್ತಿಕ ಪೂರ್ವಾಗ್ರಹಗಳು

90. ಕೆಲಸದ ಸ್ಥಳದಲ್ಲಿ ನೈತಿಕ ನಡವಳಿಕೆಯು ಇವುಗಳನ್ನು ಉತ್ತೇಜಿಸುತ್ತದೆ.

(a) ತಿರುಚುವಿಕೆ
(b) ಸಹೋದ್ಯೋಗಿಗಳ ಮಧ್ಯೆ ಅನುಮಾನ
(c) ರಹಸ್ಯ ಮತ್ತು ಸ್ಪರ್ಧೆ
(d) ನಂಬಿಕೆ ಮತ್ತು ಸಹಕಾರ
(e) ಸಮಗ್ರತೆ

ಕೆಳಗಿನ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ.

(1) (d) ಮತ್ತು (e)
(2) (a), (b) ಮತ್ತು (c)
(3) (a), (b), (c), (d) ಮತ್ತು (e)
(4) (c) ಮತ್ತು (e)

91. ಶಾಸನ ರಚನೆಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳಲ್ಲಿ ಯಾವುವು ಸರಿಯಾಗಿವೆ?

(a) ಸಂಸತ್ತಿನಲ್ಲಿ ಎಲ್ಲಾ ವಿಷಯಗಳನ್ನು ಬಹುಮತದ ಆಧಾರದ ಮೇಲೆ ತೀರ್ಮಾನಿಸಬೇಕೆಂದು 100(1)ನೇ ವಿಧಿ ತಿಳಿಸುತ್ತದೆ.
(b) 107ನೇ ವಿಧಿಯ ಅನ್ವಯ ಹಣಕಾಸಿನ ಮಸೂದೆಗಳನ್ನು ಸಂಸತ್ತಿನ ಎರಡೂ ಸದನಗಳಲ್ಲಿ ಮಂಡಿಸಬಹುದು.
(c) ಸಂಸತ್ತಿನ ಅಧಿವೇಶನ ಮುಕ್ತಾಯಗೊಂಡರೂ/ಮುಂದೂಡಿದ್ದರೂ ಸಂಸತ್ತಿನಲ್ಲಿರುವ ಮಸೂದೆ ಜೀವಂತವಾಗಿರುತ್ತದೆ.
(d) ಸಂಸತ್ತಿನ ಉಭಯ ಸದನಗಳ ಪರಿಶೀಲನೆಯ ನಂತರ ಮಸೂದೆ, ಕಾಯ್ದೆಯಾಗಿ ಜಾರಿಗೆ ಬರುತ್ತದೆ.

(1) (a) ಮತ್ತು (c) ಸರಿಯಾಗಿವೆ
(2) (a), (c) ಮತ್ತು (d) ಸರಿಯಾಗಿವೆ
(3) (b) ಮತ್ತು (c) ಸರಿಯಾಗಿವೆ
(4) (a) ಮತ್ತು (d) ಸರಿಯಾಗಿವೆ

ಕಚ್ಚಾ ಕೆಲಸಕ್ಕೆ ಸ್ಥಳ



Scanned with OKEN Scanner

92. ಯು.ಪಿ.ಎಸ್.ಸಿ. ಸದಸ್ಯರನ್ನು ನೇಮಕಾತಿ ಮಾಡುವವರು

(1) ಯು.ಪಿ.ಎಸ್.ಸಿ. ಅಧ್ಯಕ್ಷರು
(2) ಭಾರತದ ರಾಷ್ಟ್ರಪತಿ
(3) ಭಾರತದ ಪ್ರಧಾನಮಂತ್ರಿ
(4) ರಾಜ್ಯದ ರಾಜ್ಯಪಾಲರು

93. ಈ ಕೆಳಗಿನ ಯಾವುದನ್ನು / ಯಾವುವನ್ನು ಸಂವಿಧಾನದ 7ನೇ ಅನುಸೂಚಿಯಲ್ಲಿ ಸೇರಿಸಲಾಗಿದೆ?

(a) ಕೇಂದ್ರ ಪಟ್ಟಿ
(b) ರಾಜ್ಯ ಪಟ್ಟಿ
(c) ಸಮವರ್ತಿ ಪಟ್ಟಿ
(d) ಭಾರತದ ಅಧಿಕೃತ ಭಾಷೆಗಳು

ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

(1) (a), (b) ಮತ್ತು (c)
(2) (a) ಮಾತ್ರ
(3) (a) ಮತ್ತು (b) ಮಾತ್ರ
(4) (b) ಮತ್ತು (d) ಮಾತ್ರ

94. ಸಂಸದೀಯ ಸರ್ಕಾರ ಪದ್ಧತಿಯಲ್ಲಿ ಕಾರ್ಯಾಂಗವು ಯಾವುದಕ್ಕೆ ನೇರವಾಗಿ ಉತ್ತರದಾಯಿಯಾಗಿರುತ್ತದೆ?

(1) ಸಂವಿಧಾನ
(2) ನ್ಯಾಯಾಂಗ
(3) ಶಾಸಕಾಂಗ
(4) ಜನರು

95. ಭಾರತ ಸಂವಿಧಾನದ ಎಷ್ಟನೇ ಭಾಗವು ತುರ್ತುಪರಿಸ್ಥಿತಿಗೆ ಸಂಬಂಧಿಸಿದ ನಿಯಮಗಳನ್ನು ಒಳಗೊಂಡಿದೆ?

(1) XVIII ನೇ ಭಾಗ
(2) X ನೇ ಭಾಗ
(3) XII ನೇ ಭಾಗ
(4) XVI ನೇ ಭಾಗ

96. ಭಾರತ ಸಂವಿಧಾನದ 356ನೇ ವಿಧಿಯ ಅಡಿಯಲ್ಲಿ ರಾಜ್ಯದಲ್ಲಿ ಜಾರಿಗೆ ತರಲಾಗುವ ರಾಷ್ಟ್ರಪತಿ ಆಡಳಿತಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ ಸರಿಯಲ್ಲ ?

(1) ರಾಷ್ಟ್ರಪತಿ ಆಡಳಿತವನ್ನು ವಿಧಿಸಿರುವ ರಾಜ್ಯದಲ್ಲಿ ಮಾತ್ರ ಕೇಂದ್ರ ಸರ್ಕಾರದೊಂದಿಗಿನ ರಾಜ್ಯದ ಸಂಬಂಧದಲ್ಲಿ ಬದಲಾವಣೆ ಆಗುತ್ತದೆ.

(2) ರಾಜ್ಯ ಸರ್ಕಾರವು ಸಂವಿಧಾನದ ನಿಯಮಗಳ ಅನುಸಾರವಾಗಿ ಆಡಳಿತ ನಡೆಸಲು ವಿಫಲವಾದಾಗ ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತವನ್ನು ಜಾರಿಗೊಳಿಸಬಹುದು.

(3) ಇದು ಮೂಲಭೂತ ಹಕ್ಕುಗಳ ಮೇಲೆ ಪರಿಣಾಮ ಬೀರುತ್ತದೆ.

(4) ರಾಷ್ಟ್ರಪತಿ ಆಳ್ವಿಕೆಯನ್ನು ಅನುಮೋದಿಸುವ ನಿರ್ಣಯವನ್ನು ಸಂಸತ್ತಿನ ಸರಳ ಬಹುಮತದಿಂದ ಅಂಗೀಕರಿಸಬಹುದು.

---

ಕಚ್ಚಾ ಕೆಲಸಕ್ಕೆ ಸ್ಥಳ



Scanned with OKEN Scanner

97. ಸಂವಿಧಾನ ರಚನಾ ಸಭೆಯ ಶಾಶ್ವತ ಅಧ್ಯಕ್ಷರಾಗಿ ಡಾ|| ರಾಜೇಂದ್ರ ಪ್ರಸಾದ್ ಅಧಿಕಾರ ಸ್ವೀಕರಿಸುವ ಮೊದಲು ಹಂಗಾಮಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದವರು ಯಾರು?

(1) ಡಾ. ಸಚ್ಚಿದಾನಂದ ಸಿನ್ಹಾ
(2) ಸಿ. ರಾಜಗೋಪಾಲಾಚಾರಿ
(3) ಬಿ. ಎನ್. ರಾವ್
(4) ಡಾ.ಬಿ.ಆರ್. ಅಂಬೇಡ್ಕರ್

98. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

(a) ಭಾರತ ಸಂವಿಧಾನವು ಅದರ 'ಮೂಲ ಸಂರಚನೆ'ಯನ್ನು ಸಂಯುಕ್ತ ವ್ಯವಸ್ಥೆ, ಜಾತ್ಯಾತೀತವಾದ, ಮೂಲಭೂತ ಹಕ್ಕುಗಳು ಮತ್ತು ಪ್ರಜಾಪ್ರಭುತ್ವದ ನೆಲೆಯಲ್ಲಿ ವ್ಯಾಖ್ಯಾನಿಸುತ್ತದೆ.

(b) ಭಾರತದ ಸಂವಿಧಾನವು ನಾಗರಿಕರ ಸ್ವಾತಂತ್ರ್ಯಗಳನ್ನು ರಕ್ಷಿಸಲು ಮತ್ತು ಸಂವಿಧಾನಕ್ಕೆ ಆಧಾರವಾಗಿರುವ ಆದರ್ಶಗಳನ್ನು ಎತ್ತಿಹಿಡಿಯಲು 'ನ್ಯಾಯಿಕ ವಿಮರ್ಶೆಗೆ' ಅವಕಾಶ ಕಲ್ಪಿಸುತ್ತದೆ.

ಕೆಳಗಿನ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿ.

(1) (a) ಮತ್ತು (b) ತಪ್ಪು
(2) (a) ಮಾತ್ರ ಸರಿ
(3) (b) ಮಾತ್ರ ಸರಿ
(4) (a) ಮತ್ತು (b) ಸರಿ

99. ಹೊಂದಿಸಿ ಬರೆಯಿರಿ.

| | ಪಟ್ಟಿ-I | | ಪಟ್ಟಿ-II |
|---|---|---|---|
| (a) | ಸಾರ್ವಜನಿಕ ಉದ್ಯೋಗದಲ್ಲಿ ಸಮಾನತೆ | (i) | 29ನೇ ವಿಧಿ |
| (b) | ಅಲ್ಪ ಸಂಖ್ಯಾತರ ಹಕ್ಕು | (ii) | 21ನೇ ವಿಧಿ |
| (c) | ವೈಯಕ್ತಿಕ ಸ್ವಾತಂತ್ರ್ಯದ ಹಕ್ಕು | (iii) | 23ನೇ ವಿಧಿ |
| (d) | ಶೋಷಣೆಯ ವಿರುದ್ಧದ ಹಕ್ಕು | (iv) | 16ನೇ ವಿಧಿ |

ಸಂಕೇತಗಳು:

(1) a – i, b – ii, c – iv, d – iii
(2) a – ii, b – iv, c – i, d – iii
(3) a – iii, b – iv, c – ii, d – i
(4) a – iv, b – i, c – ii, d – iii

ಕಚ್ಚಾ ಕೆಲಸಕ್ಕೆ ಸ್ಥಳ



Scanned with OKEN Scanner

100. ಭಾರತ ಒಕ್ಕೂಟದ ರಾಷ್ಟ್ರಪತಿಯನ್ನು ಚುನಾಯಿಸುವವರು

(1) ಸ್ಥಳೀಯ ಸರ್ಕಾರಗಳ ಸದಸ್ಯರು

(2) ಸಂಸತ್ತಿನ ಸದಸ್ಯರು

(3) ಸಂಸತ್ತು, ರಾಜ್ಯ ವಿಧಾನಸಭೆಗಳು ಮತ್ತು ದೆಹಲಿ ಹಾಗೂ ಪುದುಚೇರಿ ಕೇಂದ್ರಾಡಳಿತ ಪ್ರದೇಶಗಳ ವಿಧಾನಸಭೆಗಳ ಚುನಾಯಿತ ಸದಸ್ಯರು

(4) ವಿಧಾನ ಪರಿಷತ್ತಿನ ಸದಸ್ಯರು

---